



ಒಂದು ದಿನ ಭಗತ್‌ಸಿಂಗ್‌ನ ತಂದೆ, ಕೃಷ್ಣಸಿಂಗ್ ತಮ್ಮ ಸ್ನೇಹಿತರಾದ ಕಿಶೋರ್ ಮೆಹತಾ ಅವರಿಗೆ ತಮ್ಮ ಮಾವಿನ ತೋಟವನ್ನು ತೋರಿಸಲು ಕರೆದುಕೊಂಡು ಹೋದರು. ಆಗ ಭಗತ್‌ಸಿಂಗ್‌ಗೆ ಇನ್ನೂ ಎರಡೂವರೆ ವರ್ಷ ವಯಸ್ಸು. ದಾರಿಯಲ್ಲಿ ಹೋಗುತ್ತಿದ್ದಾಗ, ಬಾಲಕ ಭಗತ್‌ಸಿಂಗ್ ಖಾಲಿಯಿದ್ದ ಪಕ್ಕದ ಹೊಲದೊಳಗೆ ನುಗ್ಗಿ ಪಕ್ಕನೆ ಏನನ್ನೋ ನೆಡಲು ಪ್ರಾರಂಭಿಸಿದ. ಇದನ್ನು ಕಂಡ ಕಿಶೋರ್ ಮೆಹತಾ ಪುಟ್ಟ ಬಾಲಕನನ್ನು "ನೀನು ಏನನ್ನು ನೆಡುತ್ತಿರುವೆ?" ಎಂದು ಕೇಳಿದರು. ತಕ್ಷಣವೇ ಪುಟ್ಟ ಬಾಲಕ ಭಗತ್‌ಸಿಂಗ್‌ನಿಂದ ಬಂದ ಉತ್ತರ, "ನನ್ನ ಭಾರತ ದೇಶವನ್ನು ಸ್ವತಂತ್ರವಾಗಿಸಲು ಬಂದೂಕುಗಳನ್ನು ನೆಡುತ್ತಿದ್ದೇನೆ." ಅಷ್ಟು ಚಿಕ್ಕ ಬಾಲಕನಲ್ಲಿ ಎಂತಹ ಮಹದಾಸೆ, ಎಂತಹ ಕಲ್ಪನೆ, ಎಂತಹ ಧೈರ್ಯ! ತಂದೆ ಹಾಗೂ ಸ್ನೇಹಿತರಿಬ್ಬರಿಗೂ ಆಶ್ಚರ್ಯವಾಯಿತು. ಮತ್ತೆ ಕಿಶೋರ್ ಮೆಹತಾ ಕೇಳಿದರು, "ನಿನ್ನ ಧರ್ಮ ಯಾವುದು?" ಎಂದು. ತಟ್ಟನೆ ಭಗತ್‌ಸಿಂಗ್ ಕೊಟ್ಟ ಉತ್ತರ, "ದೇಶಭಕ್ತಿ." ಹೀಗೆ ಚಿಕ್ಕಂದಿನಿಂದಲೇ ಭಗತ್‌ಸಿಂಗ್ ದೇಶಭಕ್ತಿಯನ್ನೇ ತನ್ನ ಮತ, ಕುಲ, ಗೋತ್ರ ಎಲ್ಲವೂ ಎಂದು ಬಗೆದಿದ್ದನು.



**ಚಿತ್ರ:**

ಬಿ.ಕೆ. ಸೋಮಶೇಖರ,

ಬೆಂಗಳೂರು